For more job news visit : www.kpscvaani.com

ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆಯ 6 ತಾಲ್ಲೂಕುಗಳ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ ಅಂಗನವಾಡಿ ಕಾರ್ಯಕರ್ತೆಯರು, ಮಿನಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳನ್ನು ಗೌರವ ಸೇವೆಯ ಆಧಾರದ ಮೇಲೆ ಭರ್ತಿ ಮಾಡಲು ಸ್ಥಳೀಯ ಅರ್ಹ ಮಹಿಳಾ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಬಾಗೇಪಲ್ಲಿ ತಾಲ್ಲೂಕು: ಕಾರ್ಯಕರ್ತೆಯರು-8, ಮಿನಿ ಕಾರ್ಯಕರ್ತೆಯರು-3 ಸಹಾಯಕಿಯರು-24, ಚಿಕ್ಕಬಳ್ಳಾಪುರ ತಾಲ್ಲೂಕು :ಕಾರ್ಯಕರ್ತೆಯರು-8, ಮಿನಿ ಕಾರ್ಯಕರ್ತೆಯರು-2 ಸಹಾಯಕಿಯರು-43. ಚಿಂತಾಮಣಿ ತಾಲ್ಲೂಕು: ಕಾರ್ಯಕರ್ತೆಯರು-11, ಮಿನಿ ಕಾರ್ಯಕರ್ತೆಯರು-8, ಸಹಾಯಕಿಯರು-47. ಗೌರಿಬಿದನೂರು ತಾಲ್ಲೂಕು: ಕಾರ್ಯಕರ್ತೆಯರು-22, ಸಹಾಯಕಿಯರು-48, ಗುಡಿಬಂಡೆ ತಾಲ್ಲೂಕು: ಕಾರ್ಯಕರ್ತೆಯರು-2. ಸಹಾಯಕಿಯರು-16. ಶಿಡ್ಲಘಟ್ಟ ತಾಲ್ಲೂಕು: ಕಾರ್ಯಕರ್ತೆಯರು-3, ಮಿನಿ ಕಾರ್ಯಕರ್ತೆಯರು -1, ಸಹಾಯಕಿಯರು-39 ಆಸಕ್ತ ಸ್ಥಳೀಯರು ಅಗತ್ಯ ವೆಬ್ ಸೈಟ್ https://karnemakaone.kar.nic.in/abcd/ ಮೂಲಕ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಲು ಅಕ್ಟೋಬರ್ 19 ರ ಸಂಜೆ 5:30 ರೊಳಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್ ಸೈಟ್, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ ಭವನ. ಚಿಕ್ಕಬಳ್ಳಾಪುರ ಹಾಗೂ ಸಂಬಂಧಪಟ್ಟ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಛೇರಿಯಲ್ಲಿ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.